C.C.No.:437/2014

P.W.:3

ಈ ದಿನ ದಿಃ 13-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನನ್ನ ಊರು ಪುಲಗಡ್ಡಿ ಗ್ರಾಮ. 2003 ನೇ ಇಸ್ವಿಯಲ್ಲಿ ಕೇಳಕರ ಪ್ರೌಢಶಾಲೆ ಕುಲಗೋಡ ಇಲ್ಲಿ ಕನ್ನಡ ಸಹಶಿಕ್ಷಕ ಎಂದು ನೇಮಕಗೊಂಡಿರುತ್ತೇನೆ. ಕೇಳಕರ ಶಾಲಾ ಆಡಳಿತ ಮಂಡಳಿಯ ಮೊದಲ ಆಡಳಿತ ಮಂಡಳಿ ಮತ್ತು ಹೊಸ ಆಡಳಿತ ಮಂಡಳಿಯ ನಡುವೆ ಶಾಲೆ ಆಡಳಿತ ನಡೆಸುವ ಬಗ್ಗೆ ಹೊಂದಾಣಿಕೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 2019 ನೇ ಇಸ್ವಿಯಿಂದ ಇಲ್ಲಿಯವರೆಗೆ ಚಾಸಾ2 ಲಕ್ಷ್ಮಣ ರಾಮಪ್ಪ ಭಜಂತ್ರಿ ಇವರು ಸದರಿ ಕೇಳಕರ ಪ್ರೌಢಶಾಲೆಯಲ್ಲಿ ಪ್ರಭಾರಿ ಮುಖ್ಯೋಪಾಧ್ಯಾಯರು ಎಂದು ಕೆಲಸ ಮಾಡುತ್ತಿರುತ್ತಾರೆ. ಚಾಸಾ2 ರವರ ಮೊದಲು 2008 ರಿಂದ 2019 ರವರೆಗೆ ಎಸ್ ಎಸ್ ಪರುಶೆಟ್ಟಿ ಇವರು ಪ್ರಭಾರಿ ಮುಖ್ಯೋಪಾಧ್ಯಾಯರು ಇದ್ದರು. ನಿಪಿ14 ರಿಂದ 18 ಪುಸ್ತಕಗಳು ಪರುಶೆಟ್ಟಿಯವರಿಂದ ತೆಗೆದುಕೊಂಡಿದ್ದು ನಾವು ಕೇಳಿಲ್ಲ ಎಂದರೆ ಸರಿಯಲ್ಲ. ಪರುಶೆಟ್ಟಿ ಮತ್ತು ಆರೋಪಿ ಇವರ ನಡುವೆ ಮುಖ್ಯೋಪಾಧ್ಯಾಯರ ಸ್ಥಾನಕ್ಕೆ ಪೈಪೋಟಿ ಇತ್ತು ಎಂದರೆ ಸರಿಯಲ್ಲ. ಆರೋಪಿಯನ್ನು ಕಡೆಗಣಿಸಿ ಪರುಶೆಟ್ಟಿಯವರನ್ನು ಮುಖ್ಯೋಪಾಧ್ಯಾಯರೆಂದು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ14 ರಿಂದ 18 ಪುಸ್ತಕಗಳನ್ನು ಪರುಶೆಟ್ಟಿಯವರು ಪೊಲೀಸ್ ಸಬ್ ಇನ್ಸಪೆಕ್ಟರ ಇವರಿಗೆ ನೀಡಿರುತ್ತಾರೆ. ಪರುಶೆಟ್ಟಿಯವರು ನಿಪಿ14 ರಿಂದ 18 ಪುಸ್ತಕಗಳನ್ನು ಪೊಲೀಸ್ ಠಾಣೆಯಲ್ಲಿ ನೀಡುವಾಗ ನನ್ನನ್ನು ಕರೆಸಿದ್ದರು ಎಂದರೆ ಸರಿ. ಸದರಿ ನಿಪಿ14 ರಿಂದ 18 ಪುಸ್ತಕಗಳನ್ನು ಯಾವುದರ ಸಲುವಾಗಿ ಜಪ್ತುಮಾಡಲಾಗಿರುತ್ತದೆ ಎಂದು ನಾನು ಕೇಳಿಲ್ಲ ಎಂದರೆ ಸರಿ. ಪಂಚನಾಮೆಯು ದಿಃ10-12-2011 ರಂದು ಆಗಿರುತ್ತದೆ. ನನಗೆ ಸದರಿ ಈ ಕೇಸಿನ ಬಗ್ಗೆ ಯಾವುದೇ ಇಲ್ಲ ಮಾಹಿತಿ ಲಇಲ್ಲ ಎಂದರ ಸರಿಯಲ್ಲ. ಶಾಲಾ ಆಡಳಿತ ಮಂಡಳಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸದರಿ ಪಾಟೀ ಸವಾಲನ್ನು ಇನ್ನೂಳಿದ ಪ್ರಕರಣಗಳಾದ ಸಿಸಿ ನಂಃ 475/2014, ಸಿಸಿ ನಂಃ 430/2014, ಸಿಸಿ ನಂಃ 429/14 ಪಾಟೀ ಸವಾಲು ಅಂತಾ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ನ್ಯಾ. ದಂ. ಪ್ರ. ವರ್ಗ ಮೂಡಲಗಿ.